ಧರಿಸುತ್ತಿದ್ದರು. ಅದಕ್ಕೆ ಅನೇಕ ಜೇಬುಗಳಿರುತ್ತಿದ್ದವು. ಮೊಣಕಾಲಿನವರೆಗೆ ಬರುವಂತಹ ತುಂಡುಪಂಚೆ ಸುತ್ತಿಕೊಳ್ಳುತ್ತಿದ್ದರು. ಕಿವಿಮುಚ್ಚುವ ಟೋಪಿ, ಕಾಲುಚೀಲುಗಳು, ಸವೆದುಹೋದ ಬೂಟ್ಸ್‌ಗಳು ಅವರ ಸಾಮಾನ್ಯ ವಸ್ತ್ರಸಂಹಿತೆಯಲ್ಲಿ ಜಾಗ ಪಡೆದುಕೊಂಡಿದ್ದುವು. ತೆರೆದ ಕುದುರೆಗಾಡಿಯಲ್ಲಿ ಪ್ರಯಾಗದ ಬೀದಿಗಳಲ್ಲಿ ಅವರು ಹೀಗೆ ಸಾಗುತ್ತಿದ್ದರೆ, ಜನರು ದಾರಿಯ ಇಕ್ಕೆಲಗಳಲ್ಲಿ ನಿಂತು ಕುತೂಹಲದ ಕಣ್ಣುಗಳಿಂದ ಆ 'ವಿಚಿತ್ರಪುರುಷ'ನನ್ನು ನೋಡುತ್ತಿದ್ದರು. ಆಗ ವಿಜ್ಞಾನಾನಂದರು "ಹಾಗೇಕೆ ನೋಡುತ್ತಿದ್ದೀರಿ, ಕೋತಿ ಕುಣಿಯುತ್ತಿದೆಯೇ ಇಲ್ಲಿ; ಹೌದು, ನೀವು ನೋಡುತ್ತಿರುವುದೇ ಸರಿ, ನಾನು ಶ್ರೀರಾಮಚಂದ್ರನ ಕೋತಿ. ಈ ಕೋತಿಯನ್ನು ಅವನೇ ಕುಣಿಸುತ್ತಿದ್ದಾನೆ" ಎಂದು ತಮ್ಮನ್ನು ತಾವೇ ವಿನೋದಕ್ಕೆ ಗುರಿಮಾಡಿಕೊಂಡು ಆನಂದಪಡುತ್ತಿದ್ದರು.


**ಏಕಾಂತಪ್ರಿಯತೆ:** ವಿಜ್ಞಾನಾನಂದರು ಏಕಾಂತದಲ್ಲಿರಲು ಇಷ್ಟಪಡುತ್ತಿದ್ದರು. ಕೆಲವೊಮ್ಮೆ ತಮ್ಮನ್ನು ನೋಡಲೆಂದು ಬಂದವರನ್ನು "ಈಗ ನಾನೊಬ್ಬನೇ ಇರಬೇಕು" ಎಂದು ಹೇಳುತ್ತ ಹೊರಕ್ಕೆ ಕಳುಹಿಸಿಬಿಡುತ್ತಿದ್ದರು. ಹೊರನೋಟಕ್ಕೆ ಆ ವರ್ತನೆ ಒರಟಾಗಿ ಕಾಣುತ್ತಿದ್ದರೂ ಅವರ ಅಂತರ್ಮುಖತೆಯ ಪರಿಚಯವಿದ್ದವರು ಬೇಸರಗೊಳ್ಳುತ್ತಿರಲಿಲ್ಲ. ತಮ್ಮ ಮನಸ್ಸು ಬಹಿರ್ಮುಖವಾದಾಗ ಎಲ್ಲರನ್ನೂ ಗುಡ್ಡೆಹಾಕಿಕೊಂಡು ಹಾಸ್ಯಮಯವಾಗಿ ಮಾತನಾಡುತ್ತ, ಬೇಕಾದಹಾಗೆ ನಗಿಸುತ್ತಿದ್ದರು, ಭಕ್ತರ ಕಷ್ಟಸುಖಗಳನ್ನು ವಿಚಾರಿಸಿಕೊಳ್ಳುತ್ತಿದ್ದರು. "ಹರಿಪ್ರಸನ್ನನನ್ನು ಅರ್ಥಮಾಡಿಕೊಳ್ಳುವುದೇ ಕಷ್ಟ. ಅವನು ಯಾವಾಗಲೂ ಗುಪ್ತವಾಗಿರುತ್ತಾನೆ. ಅವನು ಆತ್ಮಸಾಕ್ಷಾತ್ಕಾರ ಮಾಡಿಕೊಂಡು ಬ್ರಹ್ಮಜ್ಞಾನಿಯಾಗಿರುವುದೇ ಅದಕ್ಕೆ ಕಾರಣ" ಎಂದು ಅವರನ್ನು ಕುರಿತು ಬ್ರಹ್ಮಾನಂದರು ಹೇಳುತ್ತಿದ್ದ ಮಾತನ್ನು ಈ ಸಂದರ್ಭಕ್ಕೆ ಸ್ಮರಿಸಿಕೊಳ್ಳಬೇಕು.

**ಪ್ರಯಾಣಕಾಲ:** ಪ್ರಯಾಗದ ಅತಿರೇಕದ ಹವಾಗುಣವನ್ನಾಗಲಿ, ಊಟೋಪಚಾರಗಳ ಕೊರತೆಯನ್ನಾಗಲಿ ಲೆಕ್ಕಿಸದೆ ತಮ್ಮ ಲೋಕಸೇವಾಕಾರ್ಯಗಳನ್ನು ವಿಜ್ಞಾನಾನಂದರು ಕಳೆಗುಂದದಂತೆ ಮಾಡಿದರು. ಹೋಮಿಯೋಪತಿ ಆಸ್ಪತ್ರೆಯ ವೈದ್ಯರು ಕೆಲಸಬಿಟ್ಟು ಹೊರಟುಹೋದಾಗ ತಾವೇ ವೈದ್ಯರಾಗಿ ನಿಂತು, ಯಾವ ಕಾಯಿಲೆಗೆ ಯಾವ ಮದ್ದು ಎಂಬುದು ತಮಗೆ ತಿಳಿಯದಿದ್ದರೂ ಸಿಕ್ಕಸಿಕ್ಕ ಔಷಧಿಗಳನ್ನು ಕೊಡಹತ್ತಿದರು. ಸದ್ಗುರುವಿನ ಕೃಪೆಯಿಂದ ಪವಾಡವೆಂಬಂತೆ ರೋಗಿಗಳೆಲ್ಲ ಗುಣಮುಖರಾಗತೊಡಗಿದರು. ಕೊನೆಗೆ ಹೊಸರೋಗಿಗಳನ್ನು ನಿಯಂತ್ರಿಸುವುದೇ ದುಸ್ತರವಾಯಿತು. ಆಗ ಬೇಗನೇ ವಾರಾಣಸಿಯಿಂದ ವೈದ್ಯರನ್ನು ಕರೆತಂದು ಕೂರಿಸಿದರು. ಏನೇನು ಕೊಟ್ಟಿದ್ದಾರೆ ಎಂದು ಪರಿಶೀಲಿಸಿದಾಗ ನೈಟ್ರಿಕ್, ಸಲ್ಫ್ಯೂರಿಕ್, ಹೈಡ್ರೋಕ್ಲೋರಿಕ್ ಆಮ್ಲಗಳ ಸೀಸೆಗಳೂ ಖಾಲಿಯಾಗಿದ್ದುವು. ವೃದ್ಧಾಪ್ಯದ ಕಾರಣದಿಂದಾಗಿ ವಿಜ್ಞಾನಾನಂದರ ದೇಹಾರೋಗ್ಯವು ಕುಸಿಯತೊಡಗಿತು. ಸಾಂಕ್ರಾಮಿಕ ಜಲೋದರವೆಂಬ ಕಾಯಿಲೆಗೆ ಅವರು ಗುರಿಯಾದರು. "ಯಾವತ್ತಿದ್ದರೂ ಬಿದ್ದುಹೋಗುವ ದೇಹ, ಇದನ್ನು ಪೋಷಿಸಿಕೊಂಡು ಏನಾಗಬೇಕು, ಭವರೋಗ ವೈದ್ಯನಿರುವಾಗ ಈ ಭವಲೋಕ ವೈದ್ಯರಿಂದ ಆಗಬೇಕಾದ್ದೇನಿದೆ" ಎಂದುಬಿಟ್ಟರು. ಗಂಗಾಜಲವನ್ನು ಬಾಯಿಗೆ ಬಿಡಿಸಿಕೊಳ್ಳುತ್ತ, "ಓಂ ನಮೋ ಭಗವತೇ ರಾಮಕೃಷ್ಣಾಯ" ಎಂಬ ಮಂತ್ರಜಪ ಮಾಡುತ್ತ, ೧೯೩೮ರ ಏಪ್ರಿಲ್ ೨೫ ರಂದು ಎಪ್ಪತ್ತು ವರ್ಷಗಳ ಸಾರ್ಥಕ ಜೀವನದ ಬಳಿಕ ಅಮೃತಪುತ್ರರಾಗಿಬಿಟ್ಟರು. ಗುರುಭಾಯಿಗಳೂ ಭಕ್ತರೂ ಅವರ ಶರೀರವನ್ನು ತ್ರಿವೇಣಿ ಸಂಗಮಕ್ಕೆ ಸಮರ್ಪಿಸಿಬಿಟ್ಟರು. ಅಲ್ಲಿಗೆ ಪರಮಹಂಸರ ಸಾಕ್ಷಾತ್ ಶಿಷ್ಯಪರಂಪರೆಯ ಕೊನೆಯ ಕುಸುಮವು ಜಗನ್ಮಾತೆಯ ಮುಡಿಗೇರಿತು.

**ವಿಜ್ಞಾನಾನಂದರ ನುಡಿಮುತ್ತುಗಳು:** (೧) ಪ್ರಾಥಮಿಕ ಶಾಲಾದಿನಗಳಲ್ಲಿ ಪಠ್ಯಪುಸ್ತಕಗಳಲ್ಲಿ ಓದಿರುವ 'ಸತ್ಯವನ್ನೇ ನುಡಿಯಿರಿ, ಇನ್ನೊಬ್ಬರ ವಸ್ತುವನ್ನು ಕದಿಯಬೇಡಿ' ಎಂಬ ಸರಳ ಉಪದೇಶಗಳನ್ನು ಬದುಕಿಗೆ ಅಳವಡಿಸಿಕೊಂಡರೂ ಬೇಕಾದಷ್ಟಾಗುತ್ತದೆ. (೨) ಒಂದೇ ಸಲಕ್ಕೆ ತುಂಬಾ ಉಪದೇಶ ಕೇಳುವುದರಿಂದ ಲಾಭವಿಲ್ಲ, ಕೆಲವೇ ಸೂಚನೆಗಳನ್ನು ಸದ್ಗುರುವಿನಿಂದ ಗ್ರಹಿಸಿ, ಅವುಗಳನ್ನು ಏಕಾಗ್ರತೆಯಿಂದ ಅನುಷ್ಠಾನ ಮಾಡಿದರೆ ಎಷ್ಟೋ ಲಾಭವಾಗುತ್ತದೆ. (೩) ನಾವು ಫೌಂಟನ್ ಪೆನ್ನಿಗೆ ಮೊದಲು ಇಂಕು ತುಂಬುತ್ತೇವೆ, ಆಮೇಲೆ ಬರೆಯುತ್ತೇವೆ. ಮಾತನಾಡುವಾಗಲೂ ಹಾಗೆಯೇ ಮೊದಲು ತಲೆಗೆ ವಿಚಾರಗಳನ್ನು ತುಂಬಿಸಿಕೊಳ್ಳಬೇಕು. (೪) ಆರಂಭದಲ್ಲಿ ಮುಮುಕ್ಷುವಿಗೆ ಭಕ್ತಿಗೂ ಜ್ಞಾನಕ್ಕೂ ವ್ಯತ್ಯಾಸ ತೋರಿದರೂ ಪರಿಪೂರ್ಣತೆಯನ್ನು ಪಡೆದ ಮೇಲೆ ಎರಡೂ ಒಂದೇ ಎಂಬ ಅರಿವು ಬರುತ್ತದೆ. (೫) ನಾವು ಮನಸ್ಸಿಗಿಂತ ಬೇರೆಯಾಗಿದ್ದೇವೆ ಎಂದು ದೃಢಪಡಿಸಿಕೊಳ್ಳಬೇಕು; ಹಾಗೆ ದೃಢಪಡಿಸಿಕೊಂಡರೆ ಮಾತ್ರವೇ ಮನಸ್ಸಿಗೆ ಖಿನ್ನತೆ ಕವಿದರೂ ನಾಮಜಪ ಮಾಡುವುದು ಸಾಧ್ಯವಾಗುತ್ತದೆ. (೬) ತ್ಯಾಗವಿಲ್ಲದೆ ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿಯುವ ಆಸೆಯಿಟ್ಟುಕೊಳ್ಳುವಂತಿಲ್ಲ. (೭) ಭಗವಂತನ ಸಾಕ್ಷಾತ್ಕಾರವೇ ಜೀವನದ ಮುಖ್ಯ ಗುರಿಯಾಗಬೇಕು. ಅದರಿಂದ ಮಾತ್ರವೇ ನಾವು ಶಾಶ್ವತವಾದ ತೃಪ್ತಿಗೆ ಪಾತ್ರರಾಗುತ್ತೇವೆ. ಐಶ್ವರ್ಯ, ಕೀರ್ತಿ ಹಾಗೂ ಭೋಗವಸ್ತುಗಳನ್ನು ಸಂಗ್ರಹಿಸುವುದರಲ್ಲಿಯೇ ಮೈಮರೆತರೆ ಮನಸ್ಸಿನ ಚಾಪಲ್ಯ ಮತ್ತಷ್ಟು ಹೆಚ್ಚುತ್ತದೆ, ದುಃಖಕ್ಕೆ ತಳ್ಳಲ್ಪಡುತ್ತೇವೆ. ಐಶ್ವರ್ಯವಾಗಲಿ, ಕೀರ್ತಿಯಾಗಲಿ ಹೆಚ್ಚಿಬಿಟ್ಟಿತೆಂದರೆ ಅದು ಅಹಂಕಾರದ ಉಬ್ಬರಕ್ಕೆ ದಾರಿಯಾಗುತ್ತದೆ. ಆಧ್ಯಾತ್ಮಿಕ ಜೀವನದಲ್ಲಿ ಅಹಂಕಾರದಷ್ಟು ವಿನಾಶಕಾರಿಯಾದ ವಿಚಾರ ಬೇರೊಂದಿಲ್ಲ. ಪ್ರತಿಯೊಂದು ಕ್ಷಣದಲ್ಲಿಯೂ ಪರಮಾತ್ಮನನ್ನು ಸ್ಮರಿಸಿಕೊಳ್ಳುತ್ತಲೇ ಇರಬೇಕು. ಉಸಿರು ತೆಗೆದುಕೊಳ್ಳುವಾಗ ಪರಮಾತ್ಮನ ಕೃಪೆಯಿಂದ ನನ್ನ ಅಂತರಂಗವು ಶುದ್ಧಗೊಳ್ಳುತ್ತದೆ ಎಂದೂ, ಉಸಿರನ್ನು ಹೊರಕ್ಕೆ ಬಿಡುವಾಗ ನನ್ನ ಬಹಿರಂಗವು ಶುದ್ಧವಾಗುತ್ತಿದೆಯೆಂದೂ ಪರಿಭಾವಿಸಬೇಕು. ಅದರಿಂದ ಪರಮಶಾಂತಿ ಪ್ರಾಪ್ತವಾಗುತ್ತದೆ. ✪

# ಸಾರ್ವತ್ರಿಕ ನೀತಿಸೂತ್ರ

ಜಿ.ಎಸ್. ಜಯದೇವ



ವಿವೇಕಕಿರಣ

**ಸ್ವಾ**ಮಿ ವಿವೇಕಾನಂದರು ವೇದಾಂತ ದೃಷ್ಟಿಯಿಂದ ಶಾಶ್ವತ ಮೌಲ್ಯಗಳನ್ನು ಮತ್ತು ಸಾರ್ವತ್ರಿಕ ನೀತಿಯನ್ನು ಸಮರ್ಥಿಸುತ್ತಾರೆ. ವೇದಾಂತದ 'ಏಕತೆಯ ತತ್ತ್ವ' ಎಲ್ಲ ರೀತಿಯ ನೀತಿ ಮತ್ತು ಮೌಲ್ಯಗಳಿಗೆ ಆಧಾರವಾಗಿದೆ ಎಂದವರು ಹೇಳುತ್ತಾರೆ. ನಾವು ಈ ಏಕತೆಯನ್ನು ಎಂದರೆ, ಸಕಲ ಚರಾಚರಗಳನ್ನು ಒಂದು ಗೂಡಿಸುವ ತತ್ತ್ವವನ್ನು ಎಷ್ಟು ಸಮೀಪಿಸುತ್ತೇವೆಯೋ ಅಷ್ಟರ ಮಟ್ಟಿಗೆ ಸಹಜಶೀಲತೆಯಿಂದ ನೀತಿವಂತರಾಗುತ್ತೇವೆ. ಲೆಕ್ಕಾಚಾರದಿಂದ ನೀತಿವಂತರಾಗುವುದಕ್ಕೂ ಈ ಬಗೆಯ ಸಹಜಶೀಲತೆಯಿಂದ ನೀತಿವಂತರಾಗುವುದಕ್ಕೂ ಬಹಳ ವ್ಯತ್ಯಾಸವಿದೆ.

ಸಹಜಶೀಲತೆಯಿಂದ ಮೈಗೂಡಿದ ಮೌಲ್ಯವು ಜೀವನದ ಸಂದಿಗ್ಧ ಪರಿಸ್ಥಿತಿಯಲ್ಲಿ, ಧರ್ಮಸಂಕಟದ ಸಮಯದಲ್ಲಿ ವ್ಯಕ್ತಿಯು ತೆಗೆದುಕೊಳ್ಳಬೇಕಾದ ನಿರ್ಧಾರಗಳಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಇಂತಹ ವ್ಯಕ್ತಿತ್ವದ ಅತ್ಯಂತ ಉದಾತ್ತ ನೆಲೆಯಲ್ಲಿ ಇರುವ ವ್ಯಕ್ತಿಯು ತಾನು ಕಂಡುಕೊಂಡ ಜೀವನದ ಅರ್ಥಕ್ಕೆ ಅನುಗುಣವಾಗಿ, ಜೀವನದ ಸಾಫಲ್ಯಕ್ಕೆ ಅನುಗುಣವಾದ ನಿರ್ಧಾರವನ್ನು ತೆಗೆದುಕೊಳ್ಳುತ್ತಾನೆ. ಈ ನಿರ್ಧಾರಗಳು ಆ ವ್ಯಕ್ತಿಯು ಒಪ್ಪಿಕೊಂಡು ಬಂದ ಎಲ್ಲ ಬಗೆಯ ಹಳೆಯ ಕಟ್ಟಳೆಗಳನ್ನು ಒಡೆದುಹಾಕಿ, ಮಾನವೀಯತೆಗೆ ಬೆಲೆಕೊಟ್ಟ ಮೌಲ್ಯವಾಗಿರುತ್ತದೆ. ಉದಾಹರಣೆಗೆ ಏಸುಕ್ರಿಸ್ತನು ಒಬ್ಬ ಪತಿತ ಹೆಂಗಸಿನ ಸಂದರ್ಭದಲ್ಲಿ ತಳೆದ ನಿಲುವಾದ 'ಜೀವನದಲ್ಲಿ ಒಂದೂ ತಪ್ಪನ್ನು ಮಾಡದವರು ಮೊದಲು ಕಲ್ಲು ಹೊಡೆಯಲಿ' ಎಂಬ ಸವಾಲು; ಅಥವಾ, ಮೋಸೆಸ್‌ನ ಹಳೆಯ ಒಡಂಬಡಿಕೆಯ ನೀತಿಯಾದ – 'ಹಲ್ಲಿಗೆ ಹಲ್ಲು, ಕಣ್ಣಿಗೆ ಕಣ್ಣು' ಎಂಬಂತಹ ತರ್ಕಬದ್ಧವಾದ ಕ್ರೂರ ನೀತಿಯನ್ನು ಬದಲಿಸಿ 'ನಿನ್ನ ಶತ್ರುವನ್ನು ನಿನ್ನ ನೆರೆಯವನಂತೆಯೇ ಪ್ರೀತಿಸು' ಮತ್ತು 'ಒಂದು ಕೆನ್ನೆಗೆ ಹೊಡೆದರೆ ಮತ್ತೊಂದು ಕೆನ್ನೆ ತೋರಿಸು' ಎಂಬಂತಹ ನಿಲುವು – ಇವು ಸಹಜಶೀಲತೆಯಲ್ಲಿ ಮೈಗೂಡಿದ ಮೌಲ್ಯಗಳ ಪ್ರಭಾವಗಳೇ ಆಗಿವೆ. ಇವು ತತ್ಕಾಲದ ಪರಿಸ್ಥಿತಿಯಲ್ಲಿ ಅಸಮಂಜಸವಾಗಿ, ಅತಾರ್ಕಿಕವಾಗಿ ಕಾಣಬಹುದಾದರೂ, ಕೇವಲ ಉಪಯೋಗದೃಷ್ಟಿಯ ಆಧಾರದ ಮೇಲೆ ನಾವು ಮನುಷ್ಯ–ಮನುಷ್ಯರ ನಡುವಣ ನೀತಿ ಸಂಬಂಧಗಳನ್ನು ವಿವರಿಸಲು ಸಾಧ್ಯವೇ ಇಲ್ಲ ಎನ್ನುತ್ತಾರೆ ಸ್ವಾಮೀಜಿ. ಮನುಷ್ಯನ ವ್ಯಕ್ತಿಗತ ಅಸ್ತಿತ್ವಕ್ಕಿಂತಲೂ ಸಮಷ್ಟಿಯ ಆರೋಗ್ಯವನ್ನು ಹೆಚ್ಚಿಸಲು ಈ ಬಗೆಯ ತರ್ಕಾತೀತ ನೀತಿ ಮೌಲ್ಯಗಳು ಸಹಾಯಮಾಡುತ್ತವೆ.

ಮೇಲಿನ ಎಲ್ಲ ಕಾರಣಗಳಿಂದ ಸ್ವಾಮಿ ವಿವೇಕಾನಂದರು ಹೇಳುತ್ತಾರೆ, ಎಲ್ಲ ವ್ಯವಸ್ಥೆಗಳೂ ಸರಿಯಾಗಿ ಕೆಲಸ ಮಾಡಲು ಕಾರಣ ವ್ಯವಸ್ಥೆಯ ಸಮರ್ಪಕತೆಯೊಂದೇ ಅಲ್ಲ ಎಂದು. ಏಕೆಂದರೆ ಪ್ರಪಂಚದ ಯಾವುದೇ ವ್ಯವಸ್ಥೆಯು ಅವನತಿ ಹೊಂದುವ ಪ್ರವೃತ್ತಿಯನ್ನು ಹೊಂದಿದ್ದು, ಮೂಲದಲ್ಲಿಯೇ ಒಂದು ರೀತಿಯ ಅಪಕ್ವತೆಯನ್ನು ಹೊಂದಿರುತ್ತದೆ. ಆದ್ದರಿಂದ ಸ್ವಾಮೀಜಿ ಹೇಳುತ್ತಾರೆ, ಸಮರ್ಥ ವ್ಯವಸ್ಥೆಗಿಂತಲೂ ಮನುಷ್ಯ ಮೂಲತಃ ಒಳ್ಳೆಯವನಾಗಿರುವುದು ಮುಖ್ಯ ಎಂದು. ಅವರ ಮಾತುಗಳಲ್ಲೇ ಹೇಳುವುದಾದರೆ, "ಸಾಮಾಜಿಕ ಅಥವಾ ರಾಜಕೀಯ – ಹೀಗೆ ಯಾವುದೇ ವ್ಯವಸ್ಥೆಯ ಬುನಾದಿ ಮನುಷ್ಯನ ಒಳ್ಳೆಯತನ. ಒಂದು ದೇಶದ ಪಾರ್ಲಿಮೆಂಟ್ ಈ ನಿಯಮ, ಆ ನಿಯಮಗಳನ್ನು ಘೋಷಿಸಿದೆ ಎಂಬ ಕಾರಣಕ್ಕೆ ಆ ದೇಶ ಶ್ರೇಷ್ಠ ಅಥವಾ ದೊಡ್ಡ ದೇಶವಾಗಿಬಿಡುವುದಿಲ್ಲ. ಒಂದು ದೇಶದ ಜನ ಶ್ರೇಷ್ಠರಾಗಿರುವುದರಿಂದ ಅಥವಾ ಒಳ್ಳೆಯವರಾಗಿರುವುದರಿಂದ ಮಾತ್ರವೇ ಆ ದೇಶ ದೊಡ್ಡದಾಗುತ್ತದೆ."

ಈ ಸಂದರ್ಭದಲ್ಲಿ ಜರ್ಮನಿಯ ಅನುಭಾವಿಯಾದ ಮೈಸ್ಟರ್ ಎಖಾರ್ಟ್ (Meister Eckhart) ಎಂಬುವವನ ಮನೋಜ್ಞ ಮಾತುಗಳನ್ನು ಜ್ಞಾಪಿಸಿಕೊಳ್ಳಬಹುದು. ಅವನು ಹೇಳುತ್ತಾನೆ, "ಜನ ತಾವು ಏನನ್ನು ಸಾಧಿಸಬೇಕೆಂದು ಚಿಂತಿಸುವ ಬದಲು ತಾವು ಏನಾಗಿರಬೇಕೆಂದು ಚಿಂತಿಸುವುದು ಒಳಿತು. ಅವರ ಬದುಕು ಒಳ್ಳೆಯದಾಗಿದ್ದರೆ ಸಾಕು, ಅವರ ಕಾರ್ಯಗಳು ಜಾಜ್ವಲ್ಯಮಾನವಾಗಿರುತ್ತವೆ."

ವ್ಯಕ್ತಿಯೊಬ್ಬ ಏಕಾಂಗಿಯಾಗಿ ಬದುಕಲು ಕೆಲವು ಮೌಲ್ಯಗಳ ಅಗತ್ಯವಿಲ್ಲ. ಆದರೆ ಸಂಘಜೀವಿಯಾದ ಮನುಷ್ಯ ಸಮಷ್ಟಿಯ ಭಾಗವಾಗಿ ಬದುಕಬೇಕಾಗಿರುವುದರಿಂದ ವ್ಯಕ್ತಿ ವ್ಯಕ್ತಿಗಳ ನಡುವಣ ಸಂಬಂಧಕ್ಕೆ ಒಂದು ನಿರ್ದಿಷ್ಟ ಸೂತ್ರ ಬೇಕು. ಈ ಸೂತ್ರವು ಸತ್ಯದ ಆಧಾರದ ಮೇಲೆ ಇರಬೇಕು.